ಹಳ್ಳಿಗೆ ವರ್ಗಮಾಡಿರುತ್ತಾರೆ. ಇದನ್ನು ತಪ್ಪಿಸಿ ಕೃಷಿ ಪಾಠಶಾಲೆಯನ್ನು ಭುವನಹಳ್ಳಿಗೆ ವರ್ಗ ಮಾಡ ಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಹೆಚ್. ರಂಗನಾಥ್.—ಮಾನ್ಯ ಅಧ್ಯಕ್ಷರೇ ಇಲ್ಲಿಗೆ ಪಾಠಶಾಲೆಗೆ ಬೇಕಾದಂಥ ಜಾಗವನ್ನು ಪಡೆದುಕೊಳ್ಳಲು ಸಾಧ್ಯವಾಗಲಿಲ್ಲ ಮತ್ತು ನೀರಿನ ಸೌಕರ್ಯವೂ ಇರಲಿಲ್ಲವೆಂದು ಸರ್ಕಾರದ ವರದಿ ಇದೆ. ಮಾನ್ಯ ಸದಸ್ಯರು ಈಗ ನೀರು ಇದೆ ಎಂದು ಹೇಳುತ್ತಾರೆ. ಇದನ್ನು ವಿಚಾರಿಸಬೇಕಾಗುತ್ತದೆ. ಮತ್ತೆ ಇರಬನಹಳ್ಳಿ ಮಾಲೂರಿನಿಂದ ಕೇವಲ ೫ ಕಿಲೋಮೀಟರು ದೂರದಲ್ಲಿದೆ. ಮಾಲೂರು ತಾಲ್ಲೂಕಿನಲ್ಲಿದೆ. ಆದ್ದರಿಂದ ಆಲ್ಲಿಗೆ ಕೃಷಿ ಪಾಠಶಾಲೆಯನ್ನು ಕೊಡಬೇಕೆಂದು ಒತ್ತಾಯ ಮಾಡ ತಕ್ಕಂಥದ್ದು. ಸರಿಯಲ್ಲ ವ್ಯವಸ್ಥಿತವಾದ ಕಾಲೇಜನ್ನು ಮುಂದುವರಿಸಿಕೊಂಡು ಹೋಗುವ ಕೆಲಸವನ್ನು ಮಾಡೋಣವೆಂದು ಹೇಳುತ್ತೇನೆ.

ಶ್ರೀ ಎ. ನಾಗರಾಜು.—ಭುವನಹಳ್ಳಿಯಲ್ಲಿ ನೀರು ಸಾಕಷ್ಟು ಇದೆ. ೭೫ ಎಕರೆ ಜಮೀನು ಇದೆ. ಇರಬನಹಳ್ಳಿಯಲ್ಲಿ ೬-೭ ಎಕರೆಯಲ್ಲಿ ಮಾತ್ರ ಜಮೀನು ಇದೆ ಪಾಠ ಶಾಲೆಗಳನ್ನು ಕಟ್ಟಲು ಬಹಳ ಅನಾನುಕೂಲವಾಗುತ್ತಿದೆ. ಆದ್ದರಿಂದ ಭುವನಹಳ್ಳಿಯಲ್ಲಿ ೭೫ ಎಕರೆ ಜಮೀನು ಇರುವುದರಿಂದ ಪಕ್ಕದಲ್ಲಿ ಸರ್ಕಾರದ ವತಿಯಿಂದ ಹಾಕಿರುವ ಬೋರ್‌ವೆಲ್‌ನಿಂದ ನೀರು ಬರುವಂತೆ ಪರಿಶೀಲನೆ ಮಾಡಿ ವರ್ಗಾವಣೆಯನ್ನು ಮಾಡುವುದಕ್ಕೆ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆಯೇ ?

ಶ್ರೀ ಕೆ. ಹೆಚ್. ರಂಗನಾಥ್.— ಮಾನ್ಯ ಅಧ್ಯಕ್ಷರೇ, ನಾನು ಪರೀಕ್ಷೆ ಮಾಡುತ್ತೇನೆ.

ಪ್ರಾಥಮಿಕ ಶಾಲೆ ಶಿಕ್ಷಕರುಗಳಿಗೆ ವಸತಿ ಸೌಕರ್ಯ

೯, ಶ್ರೀ ಎಂ. ಮಹದೇವ್ (ನಂಜನಗೂಡು).— ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರುಗಳಿಗೆ ಆವರು ಕೆಲಸ ನಿರ್ವಹಿಸುತ್ತಿರುವ ಸ್ಥಳಗಳಲ್ಲಿ ವಾಸಿಸುವ ಮನೆ ಸಿಗದಿದ್ದರಿಂದ ಆವರು ಬಹಳ ತೊಂದರೆ ಅನುಭವಿಸುತ್ತಿದ್ದು ಆವರುಗಳಿಗೆ ವಸತಿ ನಿರ್ಮಿಸುವ ವಿಚಾರ ಸರ್ಕಾರದ ಗಮನದಲ್ಲಿದೆಯೇ ?

ಆ) ನಿವೃತ್ತಿ ಹೊಂದಿದ ಶಿಕ್ಷಕರುಗಳಿಗೆ ತಾಲ್ಲೂಕು ಕೇಂದ್ರಗಳಲ್ಲಿ ಶಿಕ್ಷಕರ ಕಾಲೋನಿ ನಿರ್ಮಿಸುವ ವಿಚಾರ ಸರ್ಕಾರದ ಗಮನದಲ್ಲಿದ್ದೆಯೇ ?

ಶ್ರೀ ಕೆ. ಎಚ್. ರಂಗನಾಥ್ (ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು).—

ಅ) ಇದು ಶಾಲಾ ಶಿಕ್ಷಕರ ಸಮಸ್ಯೆಯೊಂದೇ ಅಲ್ಲ. ಎಲ್ಲ ಸರ್ಕಾರಿ ನೌಕರರ ಸಮಸ್ಯೆಯೂ ಹೌದು. ಶಿಕ್ಷಕರಿಗೆ ಆವರ ವಾಸಸ್ಥಳದಲ್ಲಿ ವಸತಿ ನಿರ್ಮಿಸುವ ವಿಚಾರವು ಸದ್ಯಕ್ಕೆ ಸರ್ಕಾರದ ಆಲೋಚನೆಯಲ್ಲಿಲ್ಲ.

ಆ) ಇಲ್ಲ.

ಶ್ರೀ ಎಂ. ಮಹದೇವ್.— ಮಾನ್ಯ ಅಧ್ಯಕ್ಷರೆ, ಪ್ರಾಥಮಿಕ ಶಾಲೆಯ ಶಿಕ್ಷಕರುಗಳಿಗೆ ಸಂಬಳಗಳು ಬಹಳ ಕಡಿಮೆ ಇದೆ. ಆವರುಗಳಿಗೆ ಒಂದು ಕಡೆಯಿಂದ ಮತ್ತೊಂದು ಕಡೆಗೆ ವರ್ಗಾವಣೆ ಯಾಗುತ್ತಿದೆ. ಆವರುಗಳಿಗೆ ಕಡಿಮೆ ಸಂಬಳ ಇರುವುದರಿಂದ ಯಾರೂ ಆವರಿಗೆ ಮನೆಗಳನ್ನು ಬಾಡಿಗೆಗೆ ಕೊಡುತ್ತಿಲ್ಲ. ಮನೆ ಕಟ್ಟಿಕೊಳ್ಳಲು ಬಹಳ ಹಣ ವೆಚ್ಚಮಾಡಿ ಮನೆ ಕಟ್ಟಿಕೊಳ್ಳುವ ಪರಿಸ್ಥಿತಿಯಲ್ಲಿ ಆವರು ಇಲ್ಲ. ಈ ವಸತಿ ಸಮಸ್ಯೆಯಿಂದ ಪಾಠಪ್ರವಚನಗಳಿಗೆ ತೊಂದರೆಯಾಗಿದೆ. ವಸತಿ ಬೇಡ ವೆಂದರೆ ಆವರು ಇರತಕ್ಕ ಊರಿನಿಂದಲೇ ಪ್ರಯಾಸ ಮಾಡಲು ಸಾಧ್ಯವಿಲ್ಲ, ಏತಕ್ಕೆಂದರೆ ಸರಿಯಾಗಿ ಬಸ್‌ಗಳು ಆಲ್ಲಿ ಇರುವುದಿಲ್ಲ. ಇದನ್ನು ಪರಿಹರಿಸಲು ಸರ್ಕಾರ ಏನಾದರೂ ಕ್ರಮಗಳನ್ನು ತೆಗೆದು ಕೊಳ್ಳುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್.— ಉಪಧ್ಯಾರಿಗೆ ಕಡಿಮೆ ಸಂಬಳ ಎನ್ನುವ ಮಾತು ಒಪ್ಪುವ ಮಾತಲ್ಲ. ಅನುಕೂಲವಾಗುವ ಸಂಬಳ ಸಾಕಷ್ಟು ಆವರಿಗೆ ಇದೆ. ಸಂಬಳ ಕಡಿಮೆ ಇಲ್ಲ. ಆವರೆ ವಸತಿ ಸೌಕರ್ಯ ಹಳ್ಳಿಗಾಡಿನಲ್ಲಿ ಇಲ್ಲವೆಂಬುದು ವಾಸ್ತವಿಕವಾದ ಅಂಶ. ಮೊದಲಿನಿಂದ ಕಾರ್ಯಕ್ರಮ ಹಾಕಿಕೊಂಡು ವ್ಯವಸ್ಥೆ ಮಾಡಿದರೆ ಈ ರೀತಿ ಆಗುತ್ತಿರಲಿಲ್ಲ.

ಶ್ರೀ ಎಂ. ಮಹದೇವ್.—ಪ್ರಾಥಮಿಕ ಶಾಲೆಯ ಉಪಧ್ಯಾಯರುಗಳು ರಿಟೈರ್ಡ್ ಆಗುತ್ತಿದ್ದಾರೆ ಆವರಿಗೆ ಮನೆಗಳನ್ನು ಕಟ್ಟಿಕೊಳ್ಳಲು ಆಗುತ್ತಿಲ್ಲ, ವಸತಿ ತೆಗೆದುಕೊಳ್ಳುವುದಕ್ಕೆ ಆಗುತ್ತಿಲ್ಲ, ತಾಲ್ಲೂಕು

ಕೇಂದ್ರಗಳಲ್ಲಿ ಉಪಧ್ಯಾಯರ ಕಾಲೋನಿಗಳನ್ನು ಮಾಡಿ ಉಚಿತ ನಿವೇಶನಗಳನ್ನು ಅಥವಾ ಕನ್‌ಸೆಷನ್ ರೇಟ್‌ನಲ್ಲಿ ನಿವೃತ್ತಿ ಹೊಂದಿದವರಿಗೆ ಒದಗಿಸಿಕೊಡಲು ಸರ್ಕಾರಕ್ಕೆ ಸಾಧ್ಯವಾಗುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್. — ಸೇವೆಯಲ್ಲಿ ಇರತಕ್ಕವರಿಗೆ ಈ ಕೆಲಸ ಮಾಡಲು ಆಗುತ್ತಿಲ್ಲ. ಇನ್ನು ನಿವೃತ್ತಿ ಹೊಂದಿದವರಿಗೆ ಹೇಗೆ ಸಾಧ್ಯ. ಸಂಬಂಧಪಟ್ಟ ಮುನಿಸಿಪಾಲಿಟಿಗಳು ಪಂಚಾಯಿತಿಗಳು ಇದರ ಬಗ್ಗೆ ವಿಚಾರ ಮಾಡಬಹುದು. ಸರ್ಕಾರದಿಂದ ಮಾಡುವುದಕ್ಕೆ ಸಾಧ್ಯವಾಗಲಾರದು.

ಶ್ರೀ ಎಂ. ಮಹದೇವ್. — ಟೌನ್‌ನಲ್ಲಿ ಖಾಸಗಿಯವರು ೪೫ ಎಕರೆ ಎಲಿನಿಯೇಷನ್ ಮಾಡಿಕೊಂಡು ಒಂದು ಎಕರೆಗೆ ೪೦-೫೦ ಸಾವಿರ ರೂಪಾಯಿಗಳ ಲಾಭ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಸರ್ಕಾರದಿಂದ ೩-೪ ಎಕರೆ ವಶಪಡಿಸಿಕೊಂಡು ಇವರಿಗೆ ಕನ್‌ಸೆಷನ್ ರೇಟಿನಲ್ಲಿ ಕೊಡಲು ಕ್ರಮ ಕೈಗೊಳ್ಳುತ್ತದೆಯೆ ?

ಶ್ರೀ ಕೆ. ಹೆಚ್. ರಂಗನಾಥ್. — ಮಾನ್ಯ ಸದಸ್ಯರು ತಮ್ಮ ಪ್ರಭಾವವನ್ನು ಬೀರಬೇಕು. ಖಾಸಗಿಯ ಲೇಔಟನ್ನು ಯಾರು ಮಾಡುತ್ತಾರೆ ಅವರ ಮೇಲೆ ತಮ್ಮ ಪ್ರಭಾವ ಬೀರಬೇಕು. ಪ್ರಭಾವ ಬೀರಿ ಕನ್‌ಸೆಷನ್ ರೇಟ್‌ನಲ್ಲಿ ಇವರಿಗೆ ನಿವೇಶನಗಳನ್ನು ಕೊಡಲು ಪ್ರಯತ್ನ ಮಾಡಬೇಕು.

ಶ್ರೀ ಜೆ. ಸಿ. ಮಧುಸ್ವಾಮಿ. — ಮಾನ್ಯ ಅಧ್ಯಕ್ಷರೇ, ಸುಮಾರು ೧೫ ವರ್ಷಗಳಿಂದ ಶಿಕ್ಷಕರಿಗೆ ಮನೆಗಳನ್ನು ಕಟ್ಟಿ ಅದನ್ನು ಆಕ್ಯುಪೈ ಮಾಡಿಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಹೆಚ್. ರಂಗನಾಥ್. — ಮಾನ್ಯ ಸದಸ್ಯರು ಇದರ ಬಗ್ಗೆ ಪತ್ರ ಬರೆದರೆ ನಾನು ವಿಚಾರ ಮಾಡುತ್ತೇನೆ.

ಶ್ರೀ ಟಿ. ಎ. ಮಂಜುನಾಥ್. — ಕೆಲವು ತಾಲ್ಲೂಕ್‌ಗಳಲ್ಲಿ ಹೌಸಿಂಗ್ ಬೋರ್ಡ್‌ನವರು ಕಟ್ಟಿರತಕ್ಕ ಮನೆಗಳಲ್ಲಿ ಉಪಾಧ್ಯಾಯರುಗಳು ವಾಸಮಾಡುತ್ತಿಲ್ಲ. ಅಲ್ಲಿ ಕಿಟಕಿ ಬಾಗಿಲು ಕಿತ್ತು ಹೋಗಿವೆ. ಸಂಬಂಧಪಟ್ಟವರ ಗಮನಕ್ಕೆ ತಂದರೂ ಇದರ ಬಗ್ಗೆ ಏನೂ ಕ್ರಮ ತೆಗೆದುಕೊಂಡಿಲ್ಲ. ಅದು ಜಿಲ್ಲಾ ಪರಿಷತ್ತಿಗೂ, ಮಂಡಲ ಪಂಚಾಯಿತಿಗೂ ಬರುವುದಿಲ್ಲ. ತಾವು ಇದರ ಬಗ್ಗೆ ಕೂಡಲೆ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಕೆ. ಹೆಚ್. ರಂಗನಾಥ್. — ಇದರ ಬಗ್ಗೆ ಪತ್ರ ಬರೆದರೆ ಕ್ರಮ ತೆಗೆದುಕೊಳ್ಳುತ್ತೇನೆ.

೧೨.೦೦ ಪಿ.ಎಂ.

ಅಧ್ಯಕ್ಷರು. — ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ಆರ್. ಎನ್. ನಾಯಕ. — ಇನ್ನೂ ಎರಡು ಪ್ರಶ್ನೆಗಳು ಇವೆ, ದಯವಿಟ್ಟು ಅವಕಾಶ ಕೊಡಬೇಕು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿನ ಅರಣ್ಯ ಉತ್ಪನ್ನಗಳು

೬. ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ). — ಮಾನ್ಯ ಕೃಷಿ, ತೋಟಗಾರಿಕೆ, ಶಿಕ್ಷಣ ಹಾಗೂ ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿ ಅರಣ್ಯ ಉತ್ಪತ್ತಿಗಳನ್ನು ಗುತ್ತಿಗೆ ನೀಡುವಲ್ಲಿ ಅಕ್ರಮ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಲುಮಡ್ಡಿ ಗುತ್ತಿಗೆಯ ವ್ಯವಹಾರದಲ್ಲಿ ಲಕ್ಷಾಂತರ ರೂಪಾಯಿಗಳ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗೂ ಈ ಬಗ್ಗೆ ತೆಗೆದುಕೊಂಡಿರುವ ಕ್ರಮಗಳು ಏನು ? ಹಾಗಿದ್ದರೆ ಈ ಬಗ್ಗೆ ಸರ್ಕಾರದ ನಿಲುವು ಏನು ?